Mr. SPEAKER.—Is the Hon'ble Member aware of any instance ?

Sri SANJEEVANATH AIKALA.—Yes.

Mr. SPEAKER.—The Member may please give it in writing.

ಶ್ರೀ ಜಿ. ರಾಮೇಗೌಡ.—ಸಂಘಗಳಲ್ಲಿ ಪ್ರತಿಯೊಂದಕ್ಕೂ 40 ಎಕರೆಗಿಂತ ಕಡಿಮೆ ಜಮೀನು ಇಲ್ಲ. ಇವಕ್ಕೆ ಕೊಡುತ್ತಿರುವ ರೂಪಾಯಿ 11,500 ಯಾವ ಅಭಿವೃದ್ಧಿಗೂ ಸಾಲುವುದಿಲ್ಲ ಎಂದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—11,500 ರೂಪಾಯಿ ಕಡಿಮೆ ಎಂದು ತಾವು ಹೇಳುತ್ತೀರಿ. ಆದರೆ ಇಂಡಿಯಾ ಸರ್ಕಾರದ ತೀರ್ಮಾನದ ಪ್ರಕಾರ ಎಲ್ಲಾ ಕಡೆಗಳಲ್ಲೂ 11,500 ರೂಪಾಯಿಗಿಂತ ಕಡಿಮೆ ಇದೆ. ಅವರ ಜೊತೆಗೆ ಸಾಮಾನ್ಯವಾಗಿ ಸರ್ಕಾರ ಕೊಡತಕ್ಕಂಥ ಇತರ ಸೌಲಭ್ಯ ಪಡೆದು ಕೊಳ್ಳುವುದಕ್ಕೆ ಅವರಿಗೆ ಅವಕಾಶ ಇದೆ. ಮತ್ತು ಜಾಯಿಂಟ್ ಫಾರ್ಮಿಂಗ್ ಸೊಸೈಟಿ ಮಾಡಿ ಕೊಂಡಿರುವ ಎಲ್ಲಾ ಸದಸ್ಯರೂ ಕಡಿಮೆ ಹಿಡುವಳಿ ಇಟ್ಟುಕೊಂಡಿರುವವರು, ಮತ್ತು ಅವೇ ಭೂಮಿ ಯಲ್ಲಿ ಕೆಲಸಮಾಡುವುದರಿಂದ, ಅವರು ಶ್ರದ್ಧೆ ಇಟ್ಟು ಕೆಲಸಮಾಡಿದರೆ ಅನುಕೂಲವಾಗುತ್ತದೆ.

Deputation of Trained Teachers.

*Q.—214. Sri H. R. KESHAVA MURTHY (Gandasi).

Will the Government be pleased to state :—

(*a*) whether the Director of Public Instruction has issued orders for the reversion of departmental trained teachers now working in aided schools in the State ;

(*b*) whether they would take steps to depute trained teachers as before to the aided institutions and continue them there in the interest of the standard of education in these institutions ?

A.—Sri S. R. KANTHI (Minister for Education).—

(*a*) Yes.

(*b*) This is not possible as there are not enough trained teachers for Government Schools.

ಶ್ರೀ ಹೆಚ್. ಆರ್. ಕೇಶವ ಮೂರ್ತಿ.—ಸ್ವಾಮಿ, ಈಗ ಗ್ರಾಂಟ್-ಇನ್-ಏಡ್ ಕೋಡ್ ಪ್ರಕಾರ ಟ್ರೈನ್ಡ್ ಟೀಚರ್ಸ್ ಇಲ್ಲದೇ ಇದ್ದರೆ ನೀವು ಗ್ರಾಂಟು ಕೊಡುವುದಿಲ್ಲ, ರೆಕಗ್‌ನೈಸ್ ಮಾಡುವುದಿಲ್ಲ ಎಂದು ಕಡ್ಡಾಯವಾದ ಕಾನೂನು ಮಾಡಿದ್ದೀರಿ. ಖಾತಗಿ ಸಂಸ್ಥೆಯಿಂದ ಈ ತರಹ ಟ್ರೈನ್ಡ್ ಟೀಚರ್ಸ್ ಎಲ್ಲಾ ಡಿಪಾರ್ಟ್‌ಮೆಂಟಿಗೆ ತೆಗೆದುಕೊಂಡು ಬಿಟ್ಟರೆ ಅವರು ಎಲ್ಲಿಂದ ತೆಗೆದುಕೊಂಡು ಬರಬೇಕು. ಅವರನ್ನು ಸಪ್ಲೈ ಮಾಡುವುದು ಸರ್ಕಾರದ ಕರ್ತವ್ಯ ಅಲ್ಲವೇ ?

† ಶ್ರೀ ಎಸ್. ಆರ್. ಕಂಠಿ.—ಅವರು ಕೇಳುವುದು ಸರ್ಕಾರಿ ಟ್ರೈನಿಂಗ್ ಟೀಚರ್ಸ್. ಸರ್ಕಾರಿ ಹೈಸ್ಕೂಲಿನಲ್ಲಿ ಇರುವವರನ್ನು ಪ್ರೈವೇಟ್ ಹೈಸ್ಕೂಲುಗಳಿಗೆ ಕೊಡಬೇಕು ಎಂದು ಕೇಳುತ್ತಾ ಇದ್ದಾರೆ. ಅವರನ್ನು ಕೊಡುವುದರಿಂದ ಸರ್ಕಾರದ ಸ್ಕೂಲುಗಳನ್ನು ನಡೆಸುವುದಕ್ಕೆ ತೊಂದರೆ ಯಾಗುತ್ತದೆ. 2, 3, 4 ಟ್ರೈನ್ಡ್ ಟೀಚರ್ಸ್ ಹೈಸ್ಕೂಲುಗಳಲ್ಲಿ ಕಡಿಮೆ ಬೀಳುತ್ತಾ ಇದ್ದಾರೆ. ಆದುದರಿಂದ ಸರ್ಕಾರದವರು ಯಾವುದೇ ಟ್ರೈನ್ಡ್ ಟೀಚರ್ಸ್ ಕೊಡಬಾರದು ಎಂದು ಮಾಡಿದ್ದಾರೆ. ಹೆಚ್ಚಿಗೆ ಟೀಚರ್ಸ್ ಕೇಳುತ್ತಾ ಇರುವುದು ಅಲ್ಲಿ ಹೆಡ್‌ಮಾಸ್ಟರ್ ಮಾಡಬೇಕು ಎಂದು. ಅಲ್ಲಿ 130-250 ಗ್ರೇಡ್ ಇದ್ದರೆ ಹೆಡ್‌ಮಾಸ್ಟರ್ ಆದಕೂಡಲೇ, 250-500 ಗ್ರೇಡ್ ಸಿಕ್ಕುತ್ತದೆ. ಇದರಲ್ಲಿ ಸ್ವಲ್ಪ ವ್ಯವಹಾರ ನಡೆಯುತ್ತಿದೆ.

† Indicates that the remarks or speeches have not been revised by the member concerned.

Sri C. J. MUCKANNAPPA.—In view of the dearth of trained teachers, do Government consider the question of training more teachers in their training schools ?

ಶ್ರೀ ಎಸ್. ಆರ್. ಕಂಠಿ.—ಬಿ. ಇಡಿ. ಕಾಲೇಜಿನಲ್ಲಿ ಹೆಚ್ಚು ಸಂಖ್ಯೆ ತೆಗೆದುಕೊಳ್ಳಬೇಕು ಎಂದು ಹೇಳಿ ಈ ವರ್ಷ ತೆಗೆದುಕೊಂಡಿದ್ದೇವೆ. ಇದಲ್ಲದೆ ಹೊಸದಾಗಿ ದಾವಣಗೆರೆ ಮತ್ತು ಜಾಮಖಂಡಿಯ ಬಿ. ಇಡಿ. ಕಾಲೇಜುಗಳಿಂದ ಒಂದು ಸಾವಿರ ತರಬೇಕಾದ ಉಪಾಧ್ಯಾಯರು ಬರುವವರು ಇದ್ದಾರೆ.

Sri SANJEEVANATH AIKALA.—In view of the paucity of traine teachers, will not this problem be solved by increasing the superannuation age from 55 to 58 ?

Sri S. R. KANTHI.—It is a suggestion for action.

ಶ್ರೀ ಬಿ. ಬೈರಪ್ಪಾಜಿ.—ಏಡೆಡ್ ಹೈಸ್ಕೂಲ್ಸ್ ಎಂದು ಹೇಳಿ ಟ್ರೇನ್ಡ್ ಟೀಚರ್ಸ್ ಇಲ್ಲದೇ ಇರುವುದರಿಂದ ಗ್ರಾಂಟು ಕೊಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಾ ಇದ್ದಾರೆ. ಈ ವರ್ಷ ಮತ್ತು ಕಳೆದ ವರ್ಷ ಅನೇಕ ಪಾಠಶಾಲೆಗಳನ್ನು ಪ್ರಾರಂಭಿಸುವುದಕ್ಕೆ ಅವಕಾಶ ಕೊಟ್ಟಿರುವುದರಿಂದ, ಸಧ್ಯದಲ್ಲಿ ಟ್ರೈನ್ಡ್ ಟೀಚರ್ಸ್ ಸಿಕ್ಕದೇ ಇರುವುದು ಸರ್ಕಾರಕ್ಕೆ ಗೊತ್ತಿರುವುದರಿಂದ ಟ್ರೇನ್ಡ್ ಟೀಚರ್ಸ್ ಸಿಕ್ಕುವವರೆಗೂ ಗ್ರಾಂಟ್ ಕೊಡುವುದಕ್ಕೆ ವ್ಯವಸ್ಥೆ ಮಾಡಲೇಬೇಕಾದುದು ಸರ್ಕಾರದ ಕರ್ತವ್ಯ ಅಲ್ಲವೇ ?

ಶ್ರೀ ಎಸ್. ಆರ್. ಕಂಠಿ.—ಟ್ರೈನ್ಡ್ ಟೀಚರ್ಸ್ ಇಲ್ಲದೆ ಹೈಸ್ಕೂಲ್ ಹೇಗೆ ನಡೆಸುತ್ತಾರೆ ? ಅದಕ್ಕಾಗಿ ಟ್ರೈನ್ಡ್ ಟೀಚರ್ಸ್ ಇಲ್ಲದೆ ಸ್ಟಾರ್ಟ್ ಮಾಡಬಾರದು ಎಂದು ಹೇಳುತ್ತೇವೆ. ಮೊದಲು ಹೇಳುತ್ತಾರೆ, ಟ್ರೈನ್ಡ್ ಟೀಚರ್ಸ್ ಇದ್ದಾರೆ, ಸೂಪರ್ ಟ್ರೈನ್ಡ್ ಇದ್ದಾರೆ ಎಂದು. ಆಮೇಲೆ ಒಂದು ಹೆಡ್‌ಮಾಸ್ಟರ್ ಬೇಕು, ಒಂದು ಅಸಿಸ್ಟೆಂಟ್ ಮಾಸ್ಟರ್ ಬೇಕು ಎಂದು ಕೇಳುತ್ತಾರೆ. ಅವರಿಗೆ ಕೊಟ್ಟರೆ ನಮ್ಮ ಸರ್ಕಾರಿ ಹೈಸ್ಕೂಲುಗಳ ಗತಿ ಏನು ?

ಶ್ರೀ ಎಚ್. ಆರ್ ಕೇಶವಮೂರ್ತಿ.—ಗ್ರಾಂಟ್-ಇನ್-ಏಡ್ ಕೊಡಲು ಇರತಕ್ಕ ಕರಾಳ ಕಾನೂನನ್ನು ದಯವಿಟ್ಟು ನಡಿಲ ಮಾಡಿ, ಟ್ರೈನ್ಡ್ ಟೀಚರ್ಸ್ ಇಲ್ಲದೆ ಇದ್ದರೂ ಕೂಡ ಖಾಸಗಿ ಶಾಲೆಗಳನ್ನು ನಡೆಸುವುದಕ್ಕೆ ಅವಕಾಶ ಮಾಡುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಅದು ಕರಾಳ ಶಾಸನ ಅಲ್ಲ. ಎಲ್ಲಾ ತಾವೇ ಒಪ್ಪಿಕೊಂಡ ಗ್ರಾಂಟ್-ಇನ್-ಏಡ್ ಕೋಡ್ ತಾನೆ ಜಾರಿಗೆ ಬಂದಿರುವುದು ? ಆತುರವಾಗಿ ಹೈಸ್ಕೂಲು ಪ್ರಾರಂಭ ಮಾಡಿ ಈಗ ಟೀಚರ್ಸ್ ಇಲ್ಲ ಎಂದರೆ ಹೇಗೆ ? ಈಗ ಗ್ರಾಜುಯೇಟ್ಸ್ ಕೂಡ ಸಿಕ್ಕುವುದಿಲ್ಲ. ಅಂಥ ಶಾಲೆಗಳಿಗೆ ಮಕ್ಕಳನ್ನು ಕಳಿಸುವುದರಿಂದ ಅವರು ಪಾಸ್ ಆಗುತ್ತಾರೆಯೇ ? ಅವರ ಗತಿ ಏನು ? ಆದಕ್ಕಾಗಿ ಸರ್ಕಾರದವರು ರೂಲ್ಸ್ ರಿಲ್ಯಾಕ್ಸ್ ಮಾಡುವ ಇಚ್ಛೆ ಇಟ್ಟುಕೊಂಡಿಲ್ಲ.

Sri G. V. GOWDA.—By what time do the Government expects to train teachers for all schools, whether Government or private or local body schools.

Sri S. R. KANTHI.—I cannot give a reply to this. Most of the old high schools have got their full compliment of trained teachers. New High schools have not got. But they are being trained.

ಶ್ರೀ ಬಿ. ಭಾನ್ಕರಶೆಟ್ಟಿ.—ಈಗ ಟ್ರೈನ್ಡ್ ಟೀಚರ್ಸ್ ಇಲ್ಲದೇ ಇರುವುದರಿಂದ 55 ವರ್ಷ ವಯಸ್ಸು ಆದವರಿಗೆ ಒಂದೆರಡು ವರ್ಷ ಎಕ್ಸ್‌ಟೆನ್‌ಷನ್ ಕೊಡುತ್ತಾ ಇದ್ದಾರೆ. ಆದ್ದರಿಂದ ಸಾಮೂಹಿಕವಾಗಿ ಎಲ್ಲರಿಗೂ 58 ವರ್ಷ ಆದಮೇಲೆ ರೆಟೈರ್ ಆಗುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ ?

Mr. SPEAKER.—The Hon'ble Minister has already said that it is a suggestion for action.

Sri S. R. KANTHI.—Up to 58, the private managements can give. Beyond 58, they will have to take the permission of the Government. They are confusing the position of high schools with primary schools.

Sri R. S. HEGDE.—Sir, under the present rules Government is not admitting grant of those teachers who are not trained without the permission of the D.P.I. In view of the paucity of trained teachers, will the Government give grant on the salaries of those teachers who are trained even without the permission of the D.P.I. ?

Sri S. R. KANTHI.—It is a good suggestion. That is being considered by Government.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ತಾವು ಹೇಳಿದಿರಿ ಎಷ್ಟು ದಿವಸಕ್ಕೆ ಸಾಧ್ಯವಾಗುತ್ತದೋ ಗೊತ್ತಿಲ್ಲ ಎಂದು. ಅಲ್ಲಿಯವರೆಗೆ ಪ್ರಾರಂಭ ಮಾಡಿರುವ ಶಾಲೆಗಳ ಗತಿ ಏನು ?

Sri S. R. KANTHI.—Certain proportion of teachers are to be trained not all.

ಶ್ರೀ ಬಿ. ಬೈರಪ್ಪಾಜಿ.—ಈ ವರ್ಷ ಮತ್ತು ಕಳೆದ ವರ್ಷ ಬಿ. ಎ., ಬಿ. ಎಸ್. ಸಿ. ಗ್ರಾಜುಯೇಟ್ಸ್ ಎಷ್ಟೋ ಸ್ಕೂಲುಗಳಿಗೆ ಸಿಕ್ಕಿಲ್ಲ. ಅವರೇ ಸಿಕ್ಕದೇ ಇರುವಾಗ, ಟ್ರೈನ್ಡ್ ಗ್ರಾಜುಯೇಟ್ಸ್ ಸಿಕ್ಕುವುದು ಕಷ್ಟವಾಗಿದೆ. ಸಧ್ಯದ ಪರಿಸ್ಥಿತಿಯಲ್ಲಿ ಪ್ರಾರಂಭ ಮಾಡಿರುವ ಪಾಠಶಾಲೆಗಳಿಗೆ ಸರ್ಕಾರದ ನೆರವು ಏನು ಬರುತ್ತದೆ ಅದನ್ನು ತಪ್ಪಿಸದೇ ಇರುವುದಕ್ಕೆ ವ್ಯವಸ್ಥೆ ಮಾಡಬೇಕು.

Sri S. R. KANTHI.—So far as the employment of trained teachers is concerned, Government cannot make a relaxation because the quality of education will suffer if we do that. After all, these High Schools are meant to give proper quality education. Since the Government is trying to give quality education, if we allow teachers who are untrained to continue as teachers, it will end in some chaos.

Sri S. RAJAGOPAL.—Sir, whether the Government is having any phased programme to solve this graduate teachers problem ?

Sri S. R. KANTHI.—Government has a programme. I have already explained that this year the strength of admissions to the B. Ed. colleges has increased and two more colleges have been started.

ಶ್ರೀ ಎಸ್. ಸುಬ್ಬಯ್ಯ ನಾಯಕ್.—ತರಬೇತಾದ ಉಪಾಧ್ಯಾಯರ ಸಂಖ್ಯೆ ಕಡಿಮೆ ಇರುವಾಗ, ಈಗಾಗಲೇ ಮುಚ್ಚಿರುವ ಉಜರೆ ಟ್ರೈನಿಂಗ್ ಸ್ಕೂಲ್ ತೆರೆದು ಹೆಚ್ಚು ಮಂದಿಗೆ ತರಬೇತು ಏತಕ್ಕೆ ಕೊಡಬಾರದು ?

Sri S R. KANTHI.—That is a different question altogether. Ujare Training College is intended to give training to primary teachers.

9-00 A. M.

ಶ್ರೀ ಎಚ್. ಆರ್. ಕೇಶವಮೂರ್ತಿ.—ಇರತಕ್ಕಂಥ ಹೈಸ್ಕೂಲುಗಳಲ್ಲಿ ಟ್ರೇಂಡ್ ಶಿಕ್ಷಕರ ಸಂಖ್ಯೆ ಎಷ್ಟು ?

Sri S. R. KANTHI.—If the Hon'ble Member gives notice of a separate question, I will get the answers.

Sri GANJI VEERAPPA.—In view of the fact that large number of private high schools are started and there is a paucity of trained teachers will the Government think of giving the grants on conditional recommendation for sometime ?

Sri S. R. KANTHI.—No, Sir. The rule cannot be relaxed.

Free Secondary Education.

*Q.—250. Sri P. F. D'MELLOW (Nominated).

Will the Government be pleased to state :—

(a) whether they intend to introduce free Secondary Education throughout the State during 1966 ;

(b) whether this concession will apply to all students including those studying at private schools throughout the State ;